ಮತ್ತಷ್ಟೂ ಕ್ಷೀಣವಾಗಿತ್ತು. ರೈತರೆಲ್ಲ ಕುಗ್ಗಿಹೋದರು. ಅನಂತರೆಡ್ಡಿಗೆ ಭವಿಷ್ಯವು ಅಗಮ್ಯಗೋಚರವಾಗಿದೆ. ಎಲ್ಲಿಲ್ಲದ ನಿಶ್ಯಕ್ತಿ ಆವರಿಸಿಕೊಂಡಿತು ಆತನಿಗೆ.

ಯಾವ ಪ್ರಾಜೆಕ್ಟು ಇಲ್ಲದ, ಇದ್ದರೂ ನೀರುಬೀಳದ ಎತ್ತರದಲ್ಲಿರುವ ಮೆಹಬೂಬ್‌ನಗರ ಜಿಲ್ಲೆಯ ಮಾರುಮೂಲೆ ಕುಗ್ರಾಮ ಅದು. ಮಳೆ ಚೆನ್ನಾಗಿ ಬಂದು ಕೆರೆ ತುಂಬಿದರೂ ಕೂಡ ನೆಲ್ಲು ಸಸಿ ಹಚ್ಚುವುದಿಲ್ಲ. ಎರೆ, ದಿನ್ನೆಯ ಹೊಲಗಳಲ್ಲಿ ಒಂದು ಕಾಲದಲ್ಲಿ ಮೆಣಸಿನಕಾಯಿ, ಜೋಳ, ಔಡಲ ಹಾಕಿಕೊಂಡು ಹೇಗೋ ಕಾಲ ನೂಕುತ್ತಿದ್ದರು. ನಾಲ್ಕೈದು ವರ್ಷದಿಂದ ಹತ್ತಿಯನ್ನು ಆರಂಭಿಸಿ ಸಾವಿರಾರು ರೂಪಾಯಿ ನೋಡಿದ ಮೇಲೆ ಈ ವರ್ಷವೂ ಹುಚ್ಚಿನಿಂದ ಪ್ರತಿಯೊಬ್ಬರೂ ಹತ್ತಿ ರೈತರಾಗಿದ್ದಾರೆ. ಗುಂಟೂರು, ಪ್ರಕಾಶಂ ಜಿಲ್ಲೆಯವರನ್ನು ಭಯಭೀತರನ್ನಾಗಿ ಮಾಡಿದ ಬಿಳಿಸೊಳ್ಳೆ ಈಗ ಈ ಕಡೆಗೆ ದಾರಿ ಬದಲಿಸಿದೆ. ಇದರ ಜೊತೆಗೆ ಮಳೆಯ ಅಭಾವದ ಸ್ಥಿತಿ.

ಒಂದೊಂದು ದಿನ ಕಳೆದಂತೆಲ್ಲಾ ಅನಂತರೆಡ್ಡಿಗೆ ಒಂದು ವರ್ಷವಾದಂತೆ ಕುಗ್ಗಿಹೋಗುತ್ತಿದ್ದಾನೆ. ಹತ್ತಿಹೊಲದ ಹತ್ತಿರ ಹೋದ್ರೆ ಅಳು ಬರುತ್ತದೆ. ಅಡಿಕೆ ಎಲೆಯಂತೆ ಮಿರಮಿರ ಮಿಂಚಿದ ಎಲೆಗಳು ಈಗ ಮಡಚಿಕೊಂಡು ಬಿದ್ದಿವೆ. ದಿನದಿನಕ್ಕೂ ಗಿಡದ ಕೆಳಗೆ ಉದುರಿ ಬೀಳುತ್ತಿರುವ ಕಾಯಿಯ ಸಂಖ್ಯೆ ಹೆಚ್ಚಾಗಿ ಗಿಡ ಒಣಗಿಹೋಗುತ್ತಿದೆ.

ಈಗಂತೂ ಹತ್ತಿಹೊಲದ ಕಡೆ ಹೋಗುವುದನ್ನು ಬಿಟ್ಟಿದ್ದಾನೆ. ಆದರೆ ಮಳೆಮೇಲಿನ ನಂಬಿಕೆ ಮಾತ್ರ ಹೋಗಿಲ್ಲ ಆತನಿಗೆ.

★★★

ಒಂದೊಂದು ದಿನ ಕಳೆದಂತೆ ಉತ್ಸಾಹ ಇಮ್ಮಡಿಯಾಗುತ್ತಿದೆ ಭಾರ್ಗವಿಗೆ. ಗುರುವಾರ ಕಳೆದು ಗುರುವಾರ ಬಂದೇ ಬಿಟ್ಟಿತು. ಯಾಕೋ ಮದುವೆಯಾಗುವಾಗಲೂ ಕೂಡ ಇಷ್ಟೊಂದು ಉದ್ವೇಗ ಪಟ್ಟಿರಲಿಲ್ಲ ಆಕೆ. ಹಾಗೆಂದು ಶೋಭನಕ್ಕಾಗಿಯೂ ಅಲ್ಲ ಈ ಉದ್ವೇಗ. ದಾಂಪತ್ಯ ಜೀವನ! ಹಿಂಜರಿಕೆ ತೊಲಗಿಸಿಕೊಂಡು ಕಳೆಯುವ ಈ ದಾಂಪತ್ಯ ಜೀವನದ ಕುರಿತೇ ಆಕೆಯ ಉದ್ವೇಗ! ಮದುವೆಯಾದರೂ ಕೂಡ ಕಾರ್ಯವೆನ್ನುತ್ತಾ, ಮುಹೂರ್ತಗಳಿಲ್ಲವೆಂದೂ ಹೀಗೆ ಹಿಂಜರಿಕೆಯಿಂದಲೇ ಇಷ್ಟುದಿನ ಬದುಕಿದ್ದೇ ಆಕೆಯನ್ನು ನೋಯಿಸಿತು. ಅದು ಈಗ ಕೊನೆಯಾಗುತ್ತಿರುವುದಕ್ಕೆ ಸಂತೋಷ.

'ಏನೇನ್ ತರಬೇಕು' ಕೇಳುತ್ತಿದ್ದಾನೆ ಅನಂತರೆಡ್ಡಿ ಸುಶೀಲಳನ್ನು.

'ಹೂವು, ಹಣ್ಣು...' ಹೇಳಿದಳಾಕೆ. ತಂದೆಯನ್ನು ನೋಡುತ್ತಿದ್ದ ಭಾರ್ಗವಿಗೆ ಯಾಕೋ ಹೇಳತೀರದ ನೋವು ಎನಿಸಿತು. ಮಳೆ ಬಂದಿದ್ದರೆ ತನ್ನ ತಂದೆ ಎಷ್ಟು ಉತ್ಸಾಹದಿಂದಿರುತ್ತಿದ್ದ ಎಂದುಕೊಂಡಳು.

'ಹುಯ್ಯೋ ಹುಯ್ಯೋ ಮಳೆರಾಯ... ಹತ್ತಿಹೊಲ ಬೆಳಿಬೇಕು ಮಳೆರಾಯ.'

★★★

ಭಾರ್ಗವಿಯ ಮಾತು ನಿಜವಾಯಿತು. ಶುಕ್ರವಾರ ಬೆಳಗ್ಗೆ ಬರಬೇಕಾಗಿದ್ದ ರಾಜಶೇಖರ್ ಗುರುವಾರ ರಾತ್ರಿಯೇ ಬಂದಿದ್ದಾನೆ. ಅವನು ಬಂದದ್ದು ಮನೆಮಂದಿಗೆಲ್ಲಾ ಸಂತೋಷವಾಗಿದೆ. ಮನಸ್ಸೆಲ್ಲಾ ಭಾರ್ಗವಿ ಕಡೆಯಿದ್ದರೂ ಅನಿವಾರ್ಯವಾಗಿ ರಾಜಶೇಖರ ಮಾವ ಬಾಮೈದುನರಿಬ್ಬರೊಂದಿಗೆ ಕಾಲಕ್ಷೇಪ ಮಾಡಿದ.

ಮರುದಿನ ಹಗಲು ಬಹುಬೇಗ ಕಳೆದಂತಾಯಿತು ಭಾರ್ಗವಿಗೆ. ತನಗೆ ಒಂದೊಂದು